Hunger Strike by the Basic Health Workers.

SRI H D. DEVE GOWDA (Holenarasipur) I want to draw the attention of the Hon. Health Minister regarding the hunger strike by the Basic Health Workers that is going on. I have sent a Notice yesterday itself to the Legislature Secretariat. I want to know the reaction of the Government. They have placed certain demands.

SRI H. SIDDAVEERAPPA.—I got it to-day at 8-30 A.M. I will make a statement tomorrow.

Discussion on a Matter of urgent public importance under Rule 59 :

Re : Award of the Tribunal on the Krishna waters Dispute.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸಿಪುರ),—ಮಾನ್ಯ ಅಧ್ಯಕ್ಷರೆ, ಕೃಷ್ಣಾ ನದಿ ನೀರಿನ ಹಂಚಿಕೆ ವಿಷಯದಲ್ಲಿ ಏನೊಂದು ನಿರ್ಣಯವನ್ನು ಕೊಟ್ಟಿದ್ದಾರೆ, ಅದರ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತೇನೆ. ನನ್ನ ಚರ್ಚೆಯನ್ನು ಮುಂದುವರಿಸುವುದಕ್ಕಿಂತ ಮುಂಚೆ ಸರ್ಕಾರದ ಪರವಿಯಿಂದ ಕೆಲವು ವಿವರಣೆಗಳನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ೧೯೭೩ನೇ ಡಿಸೆಂಬರ್‌ನಲ್ಲಿ ಪಂಚಾಯ್ತು ಯವರು ಈ ನೀರಿನ ಹಂಚಿಕೆ ಬಗ್ಗೆ ಏನೊಂದು ನಿರ್ಣಯ ಕೊಟ್ಟಿದ್ದಾರೆ, ಆ ನಿರ್ಣಯ ಆದಮೇಲೆ ರಾಜ್ಯ ಸರ್ಕಾರದವರು ಏನು ಕ್ರಮಗಳನ್ನು ಅದರ ಮೇಲೆ ತೆಗೆದುಕೊಂಡಿದ್ದಾರೆ, ಅವರ ನಿಲುಮೆ ಏನು ಎನ್ನುತಕ್ಕ ಬಗ್ಗೆ ಸ್ವಲ್ಪ ವಿವರಣೆ ಕೊಟ್ಟರೆ ಬಹುಶಃ ಆದೇ ಚರ್ಚೆಗೆ ಉಪಯುಕ್ತವಾಗುತ್ತದೆ ಎನ್ನುವ ದೃಷ್ಟಿಯಿಂದ ಪೂರ್ವಭಾವಿಯಾಗಿ ಸರ್ಕಾರದವರಿಂದ ಉತ್ತರವನ್ನು ಅಪೇಕ್ಷಿಸುತ್ತೇನೆ. ಏಕೆಂದರೆ ಇವತ್ತು ಚರ್ಚೆಯ ಕಾಲದಲ್ಲಿ ಹಲವಾರು ಗಹನವಾದ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ೧೯೭೩ರಲ್ಲಿ ಈ ಪಂಚಾಯ್ತಿಯವರು ಕೊಟ್ಟಂಥ ನಿರ್ಣಯವನ್ನು ತೀರ್ಪು ಎಂದು ಹೇಳುವುದಿಲ್ಲ. ಅವರ ಅಭಿಪ್ರಾಯ ಏನಿದೆ ಅದಕ್ಕೆ ಸರ್ಕಾರ ತಾಳಿರತಕ್ಕಂಥ ನಿಲುವು ಏನು ಎಂದು ಹೇಳಿದರೆ ಇದರ ಬಗ್ಗೆ ಚರ್ಚೆಮಾಡಲು ಬಹಳ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರದ ಅಭಿಪ್ರಾಯವನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ. ಟ್ರಿಬ್ಯುನಲ್ ನಿರ್ಣಯ ಕೊಟ್ಟಮೇಲೆ ಈ ನಿರ್ಣಯವನ್ನು ಸರ್ಕಾರ ವಿಚಾರ ಮಾಡಿ ಇದರಲ್ಲಿ ಅವರು ಕೊಟ್ಟಿರತಕ್ಕ ತೀರ್ಪುಗಳಲ್ಲಿ ಕೆಲವು ನ್ಯಾಯ ಸಮ್ಮತವಾಗಿಲ್ಲ, ಮತ್ತು ಅವರ ಅಧಿಕಾರ ವ್ಯಾಪ್ತಿಗೆ ಮೀರಿದವು, ಕೆಲವು ಇವೆ. ಮತ್ತು ಕೆಲವು ವಿಷಯದಲ್ಲಿ ತಮಗಿರತಕ್ಕ ಅಧಿಕಾರವನ್ನು ಪ್ರಯೋಗ ಮಾಡಿ ತನ್ಮೂಲಕ ಸಮಗೆ ಬರಬೇಕಾದಷ್ಟನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿಲ್ಲ ಆದುದರಿಂದ ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಹಾಕಿತ್ತು. ಇದಾದಮೇಲೆ ಸುಪ್ರೀಂ ಕೋರ್ಟ್‌ನವರು ಈ ಬಗ್ಗೆ ತಿರಸ್ಕಾರ ಮಾಡತಕ್ಕಂಥ ಒಂದು ಸೂಚನೆ ಕಂಡುಬಂತು.

ಆದಕಾರಣ ಸರ್ಕಾರ ಅದನ್ನು ವಾಪಸ್ ತೆಗೆದುಕೊಳ್ಳಬೇಕಾಯಿತು. ಇದಾದಮೇಲೆ ಶಾಸಕರ ಪ್ರಕಾರ ಟ್ರಿಬ್ಯುನಲ್‌ನವರು ಕೊಟ್ಟಂಥ ತೀರ್ಪು ಗೆಜೆಟ್‌ನಲ್ಲಿ ಪಬ್ಲಿಷ್ ಆಗುವವರೆಗೆ ಅದು ಹುಕುಂ ಆಗುವುದಿಲ್ಲ. ಈ ಮಧ್ಯೆ ಇರತಕ್ಕ ಕಾಲಾವಕಾಶ ೩ ತಿಂಗಳಲ್ಲಿ ಸಂಬಂಧಪಟ್ಟ ಯಾವ ರಾಜ್ಯ ಬೇಕಾದರೂ ಅವರು ಕೊಟ್ಟಿರತಕ್ಕ ತೀರ್ಪು ಅಥವಾ ನಿರ್ಣಯದ ಬಗ್ಗೆ ಅನುಮಾನಗಳನ್ನು ಪರಿಚ್ಛೇದ ಮಾಡಿಕೊಳ್ಳತಕ್ಕದ್ದು ಇಲ್ಲವೇ ಯಾವುದಾದರೂ ಒಂದು ತೀರ್ಪಿನ ಬಗ್ಗೆ ವಿವರಗಳನ್ನು ಕೇಳತಕ್ಕದ್ದು ಮತ್ತು ಅವಶ್ಯವಿದ್ದರೆ ಅವರು ಮಾಡಿರತಕ್ಕ ತೀರ್ಪಿನ ಬಗ್ಗೆ ಮಾರ್ಪಾಡು ಮಾಡಕ್ಕೆಕ್ಕಂಥಾದ್ದು, ಅವುಗಳ ಬಗ್ಗೆ ಮಾಹಿತಿ ಕೇಳತಕ್ಕದ್ದು ಮತ್ತು ಸೂಚನೆಯನ್ನು ಕೊಡತಕ್ಕ ಅಧಿಕಾರ ಪ್ರತಿಯೊಂದು ಸರ್ಕಾರಕ್ಕೂ ಇದೆ. ಆ ಪ್ರಕಾರವಾಗಿ ನಾವು ಅವರು ಕೊಟ್ಟಿರತಕ್ಕ ನಿರ್ಣಯಗಳ ಬಗ್ಗೆ ಎಲ್ಲೆಲ್ಲಿ ಅನುಮಾನಗಳು ಇದ್ದುವೋ ಅನುಮಾನಗಳನ್ನು ಪರಿಚ್ಛೇದ ಮಾಡಿಕೊಳ್ಳಲಿಕ್ಕೆ ಮತ್ತು ಎಲ್ಲೆಲ್ಲಿ ಅವುಗಳನ್ನು ಮಾರ್ಪಾಡು ಮಾಡುವುದಕ್ಕೆ ಸಾಧ್ಯ ಇದೆ, ಅವುಗಳನ್ನು ಮಾರ್ಪಾಡು ಮಾಡುವುದಕ್ಕೆ ನಾವು ಅನೇಕ ಅಂಶಗಳನ್ನು ಒಳಗೊಂಡ ಒಂದು ಪಟ್ಟಿಯನ್ನು ತಯಾರು ಮಾಡಿ ಅವರಿಗೆ ಕೊಟ್ಟಿದ್ದೆವು. ಈ ಬಗ್ಗೆ ವಿಚಾರ